# ಪೌರುಷವಾದ- ವಿಧಿವಾದ

'ಬದುಕಿಗಾರ್ ನಾಯಕರು? ಏಕರೊ, ಅನೇಕರೊ? ವಿಧಿಯೊ, ಪೌರುಷವೋ?...' ಇವು ಡಿ.ವಿ.ಜಿ.ಯವರ ಮಂಕುತಿಮ್ಮ ನಮ್ಮ ಮುಂದಿಡುವ ಕೆಲವು ಮೂಲಭೂತ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ಸರ್ವಸಮ್ಮತವೆನ್ನಿಸುವ ಉತ್ತರಗಳನ್ನು ಹೇಳಲು ಯಾರಿಂದಲೂ ಸಾಧ್ಯವಾಗಿಲ್ಲ. 'ನಮ್ಮ ಬದುಕು ನಮ್ಮದೇ ಕನಸು, ಅದನ್ನು ನನಸಾಗಿಸಿಕೊಳ್ಳುವ ಶಕ್ತಿ ನಮ್ಮಲ್ಲಿದೆ' ಎನ್ನುವ ಪೌರುಷವಾದಿಗಳನ್ನು ಆಗಾಗ ನೋಡುತ್ತಿರುತ್ತೇವೆ. ಅವರ ಮಾತುಗಳಲ್ಲಿ ಆತ್ಮಪ್ರತ್ಯಯವಿದೆ; ಸ್ವತಂತ್ರ ಮನೋಧರ್ಮವಿದೆ; ಪೌರುಷಗುಣವಂತೂ ಇದ್ದೇ ಇದೆ. ಆದರೆ ಅಂಥವರೂ ಆಶಯಗಳಿಗೆ, ಕನಸುಗಳಿಗೆ ಅನುಗುಣವಾಗಿ ಬದುಕುವುದರಲ್ಲಿ ಸೋಲನ್ನು ಅನುಭವಿಸುತ್ತಾರೆ. ಅನಿವಾರ್ಯವಾಗಿ ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಳ್ಳಬೇಕಾದ ಸಂದರ್ಭಗಳೂ ಅವರಿಗೆ ಒದಗಿ ಬರುತ್ತವೆ. ಹೀಗಾಗಿ 'ಪೌರುಷ'ವಷ್ಟೇ ಬದುಕನ್ನು ನಡೆಯಿಸುವ ಏಕೈಕ ಇಂಧನವೆಂಬ ತೀರ್ಮಾನಕ್ಕೆ ಬರುವುದು ಎಂಥವರ ಪಾಲಿಗೂ ಕಷ್ಟವೇ.

ನಮ್ಮ ಜೀವನದ ಪಥವೆಂಬುದು ಸಾಮಾನ್ಯವಾಗಿ ಏರಿಳಿತಗಳಿಂದ ಕೂಡಿರುವಂಥದ್ದು. ಬಿಟ್ಟ ಬಾಣದಂತೆ ನಿರ್ದಿಷ್ಟ ದಿಕ್ಕಿನಲ್ಲಿ, ಸರಳ ರೇಖೆಯಲ್ಲಿ ಬದುಕಿನ ದಾರಿಯಲ್ಲಿ ನಡೆಯುವಂಥವರು ವಿರಳಾತಿ ವಿರಳ. ಎಷ್ಟೊಂದು ಎಚ್ಚರದಿಂದ, ಎಲ್ಲ ಬಗೆಯ ಲೆಕ್ಕಾಚಾರ ಹಾಕಿ, ನಮ್ಮದೇ ಆದ ರೀತಿಯಲ್ಲಿ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದರೂ, ಆಚಾನಕವಾಗಿ, ಅನಿರೀಕ್ಷಿತವಾಗಿ ಏನೋ ಸಂಭವಿಸಿ, ನಮ್ಮೆಲ್ಲ ಲೆಕ್ಕಾಚಾರಗಳೂ ತಿರುವು ಮುರುವಾಗುವ ಸಂದರ್ಭಗಳು ಕಾಣಿಸಿಕೊಳ್ಳುತ್ತವೆ; ನಮ್ಮ ನಿರೀಕ್ಷೆಗೆ ವಿರುದ್ಧ ದಿಕ್ಕಿನಲ್ಲಿ ನಮ್ಮ ಬದುಕು ಹೊರಳಿಕೊಳ್ಳುವಂತಾಗುತ್ತದೆ. ಅಂಥ ಸಂದರ್ಭಗಳಲ್ಲೇ ಮಂಕುತಿಮ್ಮನಂತೆ ನಾವೂ- 'ಬದುಕಿಗಾರ್ ನಾಯಕರು?... ವಿಧಿಯೋ, ಪೌರುಷವೋ?...' ಎಂದು ಕೇಳುವ ಅನಿವಾರ್ಯತೆ ಕಾಣಿಸಿಕೊಳ್ಳುತ್ತದೆ.

ವಿಕಾಸ ವೃಕ್ಷದಲ್ಲಿ ಸದ್ಯಕ್ಕೆ ಮನುಷ್ಯನೇ ಕೊನೆಯ ಕುಡಿ ಎನ್ನುತ್ತಾರೆ ವಿಜ್ಞಾನಿಗಳು. ಮನುಷ್ಯ ಬೇರೆಲ್ಲ ಜೀವಿಗಳ ಇತಿಮಿತಿಗಳನ್ನು ಸಾಧ್ಯವಾದಷ್ಟು ನಿವಾರಿಸಿಕೊಂಡು, ಬದುಕಿನ ಹೋರಾಟದಲ್ಲಿ ಅವುಗಳಿಗಿಂತ ಹೆಚ್ಚು ಯಶಸ್ವಿಯಾಗಿದ್ದಾನೆ. ಆದರೆ ಆತ ಪರಿಪೂರ್ಣ ಎನ್ನಬಹುದಾದ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಿಲ್ಲವೆಂದೇ ಹೇಳಬೇಕು. ಅವನಿಗೂ ಹಲವಾರು ಮಿತಿಗಳಿವೆ; ದೇಹದ, ಮನಸ್ಸಿನ, ಬುದ್ಧಿಯ ಮಿತಿಗಳೊಂದಿಗೆ ಅವನೇ ರೂಪಿಸಿಕೊಂಡ ಕುಟುಂಬ, ಸಮಾಜ ಮುಂತಾದುವುಗಳ ಸೀಮಾರೇಖೆಗಳೂ ಇವೆ. ಅವೆಲ್ಲವೂ ಆತನ ಸ್ವಾತಂತ್ರ್ಯದ ಹಾಗೂ ಆತನ ಬಾಳ್ವೆಯ ಅಕ್ಷಾಂಶ- ರೇಖಾಂಶಗಳನ್ನು ನಿರ್ಧರಿಸುತ್ತವೆ. ಅವುಗಳೆಲ್ಲದರ ಆಚೆಗೆ, ಆತನ ಊಹೆಗೂ ಮೀರಿದ ಘಟನೆಗಳು ಸಂಭವಿಸಿ, ಅತ ತನ್ನ ಇಂದ್ರಿಯ, ಮನಸ್ಸು, ಬುದ್ಧಿಗಳಿಗೆ ಮೀರಿದ ಯಾವುದೋ ಒಂದು ತನ್ನ ಬದುಕನ್ನು ನಿಯಂತ್ರಿಸುತ್ತದೆ ಎಂಬ ನಿಲುಗಡೆಗೆ ಬರುತ್ತಾನೆ. ಅದನ್ನೇ 'ವಿಧಿ'ಯೆಂದೋ, 'ಪ್ರಾಪ್ತಿ'ಯೆಂದೋ, 'ಪ್ರಾರಬ್ಧ'ವೆಂದೋ, 'ಅದೃಷ್ಟ'ವೆಂದೋ ಕರೆಯುತ್ತೇವೆ.

ಬದುಕಿಗೆ 'ವಿಧಿಯೇ ನಾಯಕ' ಎಂದು ದೃಢವಾಗಿ ನಂಬಿರುವ ನಿಯತವಾದಿಗಳ ಸಂಖ್ಯೆ ಸಾಕಷ್ಟು ದೊಡ್ಡದೇ. ಭರ್ತೃಹರಿಯಂಥವರೂ 'ಹತವಿಧಿ ಪರಿಪಾಕಃ ಕೇನವಾಲಂಘನೀಯಮ್' (ದುರ್ವಿಧಿಯ ಪರಿಣಾಮವನ್ನು ಯಾರು ತಾನೇ ಮೀರಿಯಾರು?) ಎಂದು ನಿಟ್ಟುಸಿರು ಬಿಡುತ್ತಾನೆ. 'ನಮ್ಮ ಬಾಳು ಪೂರ್ವನಿಶ್ಚಿತ, ಎಲ್ಲವೂ ವಿಧಿಯ ಸಂಕಲ್ಪದಂತೆ ನಡೆಯುತ್ತದೆ; ಅಲ್ಲಿ ನಮ್ಮ ಸ್ವಂತಿಕೆಗೆ ಕಿಮ್ಮತ್ತಿಲ್ಲ' ಎಂದು ಕೈ ಚೆಲ್ಲಿ ಕುಳಿತುಕೊಳ್ಳುವವರನ್ನು ನಾವು ನೋಡುತ್ತಿರುತ್ತೇವೆ. ಇದು ಮನುಷ್ಯನಲ್ಲಿ ಸುಪ್ತವಾಗಿರುವ ಜಡತ್ವವನ್ನು ಪೋಷಿಸುವ ಮನೋಧರ್ಮವಾಗಿ ಬೆಳೆದು, ನಿಷ್ಕ್ರಿಯತೆಗೆ ದಾರಿ ಮಾಡಿಕೊಡುತ್ತದೆ, ವಿಕಸನ ಪ್ರಕ್ರಿಯೆಗೆ ಮಾರಕವಾಗುತ್ತದೆ; ನಮ್ಮಲ್ಲಿರಬೇಕಾದ ಭವಿಷ್ಯದ ಕುರಿತಾದ ಕನಸುಗಳು ಕಮರಿಹೋಗುವಂತೆ ಮಾಡುತ್ತದೆ. ಇದೊಂದು ನೇತ್ಯಾತ್ಮಕ ಪ್ರವೃತ್ತಿಯಾಗಿ, ವ್ಯಷ್ಟಿ-ಸಮಷ್ಟಿಗಳ ಪ್ರಗತಿಗೆ ಅಡಚಣೆಯೊಡ್ಡುತ್ತದೆ.

ಆದ್ದರಿಂದಲೇ, ವಿಧಿಯ ಬಗ್ಗೆ ಚಿಂತಿಸದೆ, ಫಲದ ಕುರಿತು ಯೋಚಿಸದೆ, ಪುರುಷ ಪ್ರಯತ್ನಕ್ಕೆ ಮಹತ್ವ ಕೊಟ್ಟಾತ, ಬದುಕಿನಲ್ಲಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎನ್ನುತ್ತಾರೆ ತಿಳಿದವರು.

■ ವೈನತೇಯ

---

# ಮಾತೇ ಮುತ್ತು

★ ನನ್ನದೇ 'ಸರಿ' ಎಂದು ಸಾಕಷ್ಟು ಕಾಲ ಹೇಳುತ್ತ ಅಥವಾ ಪ್ರತಿಭಟಿಸುತ್ತ ಇದ್ದರೆ, ನಿನ್ನದು 'ತಪ್ಪೇ' ಆಗಿರುತ್ತದೆ.

-ಯಹೂದಿ ಗಾದೆ

★ ನಾವು ತಪ್ಪನ್ನು ಮಾಡುವುದಿಲ್ಲ ಎಂದುಕೊಳ್ಳುವ ತಪ್ಪನ್ನು ಎಂದೂ ಮಾಡಬಾರದು.

-ಗಾಂಧೀಜಿ

★ ತಪ್ಪು ಮಾಡಿದ್ದನ್ನು ತಿದ್ದಿಕೊಳ್ಳದಿರುವುದು, ಅದು ಇನ್ನೊಂದು ತಪ್ಪು.

-ಕನ್‌ಫ್ಯೂಷಿಯಸ್

★ ನನಗೆ ತಪ್ಪು ಮಾಡುವ ಅಧಿಕಾರವೂ ಇರಲಿಲ್ಲ. ಅದರಿಂದ ತಿಳುವಳಿಕೆಗೆ ಅವಕಾಶವೂ ಸಿಕ್ಕದೆ ಹೋಯಿತು.

-ಅಶ್ವತ್ಥ

★ ತಾಯೊಲವೆ ತಾಯೊಲವು ಈ ಲೋಕದೊಳಗೆ, ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ.

-ಜಿ.ಎಸ್.ಶಿವರುದ್ರಪ್ಪ

★ ಒಂದಲ್ಲ ಒಂದು ತಪ್ಪು ಮಾಡದ ಮನುಷ್ಯ ಯಾರು?

-ತರಾಸು

★ ಬದುಕಿಬಿಟ್ರಲ್ರೀ... ತಪ್ಪನ್ನು ಒಪ್ಪಿಕೊಂಡಿದ್ದಕ್ಕೆ ಬದುಕಿಬಿಟ್ರಲ್ರೀ...

-ಪರ್ವತವಾಣಿ

★ ಅಮ್ಮನಿಗೆ ಗೊತ್ತಿತ್ತು: ಅವಳು ನನ್ನನ್ನು ಪುಟ್ಟ ಎಂದು ಕರೆದಳು. ನನ್ನ ಪುಟ್ಟ ಕೆಲಸಕ್ಕೆ ನೀವು ಕೈಜೋಡಿಸಿ, ಹಿರಿದು ಮಾಡೋಣ.

-ಪುಟ್ಟರಾಜ ಗವಾಯಿ

★ 'ತ್ಯಾಗ' ಬಡವರಿಗೆ ಅತಿ ಸುಲಭ.

-ನಾ.ಕಸ್ತೂರಿ

★ ತಾಯ್ತನ ಸಿಕ್ಕಂತ ಹೆಂಗಸಿಗೆ ಸೌಭಾಗ್ಯ ಬೇಕೆ!

-ಅನಕೃ

★ ದೇವರು ಯಾವಾಗಲೂ ಎಲ್ಲ ಕಡೆಯಲ್ಲೂ ಇರುವುದು ಸಾಧ್ಯವಿಲ್ಲ. ಆದ್ದರಿಂದಲೇ ಅವನು ತಾಯಂದಿರನ್ನು ಸೃಷ್ಟಿಸಿದ.

-ಎಡ್ವಿನ್ ಆರ್ನಾಲ್ಡ್

★ ತಾಯಿ ಎಂಬುದು ಮಕ್ಕಳ ಹೃದಯದಲ್ಲೂ, ತುಟಿಯ ಮೇಲೂ ಇರುವ ದೇವರ ಹೆಸರು.

-ವಿಲಿಯಂ ಥ್ಯಾಕರೆ

★ ತಾಯಿ ನೀಡಿದ ಅನ್ನಕ್ಕೂ ಪಂಚತಾರಾ ಹೋಟೆಲ್‌ನವರು ಇಕ್ಕಿದ ಅನ್ನಕ್ಕೂ ಬಹಳ ಅಂತರ. ಕಾಣಲು ಎರಡೂ ಒಂದೇ; ಆದರೆ ತಾಯಿಯ ಅನ್ನದ ಅದ್ಭುತ ಸವಿಯನ್ನು ಹೃದಯವಿದ್ದವನೇ ಅನುಭವಿಸಬಲ್ಲ.

-ಸಿದ್ದೇಶ್ವರ ಸ್ವಾಮಿಗಳು

★ ಒಂದು ಜನಾಂಗದ ರಾಜಕೀಯ ವಿಕಾಸ ಸಾಧ್ಯವಾಗಬೇಕಾದರೆ ಅದಕ್ಕೆ ಮುನ್ನ ಆ ಜನರ ಮನಸ್ಸು ಮತ್ತು ಆತ್ಮಗಳು ದಾಸ್ಯದಿಂದ ಬಿಡುಗಡೆ ಹೊಂದಲೇಬೇಕು.

-ಬಿ.ಆರ್.ಅಂಬೇಡ್ಕರ್

★ ಮಕ್ಕಳನ್ನು ಹೆತ್ತವರು ನಲಿಯೋದುಂಟು; ಅಳೋದೂ ಉಂಟು.

-ಎಂ.ಆರ್.ಶ್ರೀನಿವಾಸಮೂರ್ತಿ

★ ಹೆತ್ತವರೆಂದರೆ ಬರೇ ಪಾಲಕರಲ್ಲ, ಕೇಳಿದ್ದು ತರುವ ಆಜ್ಞಾ ಪಾಲಕರು!

-ಎಚ್.ಡುಂಡಿರಾಜ್